**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಎನ್.ಡಿ.ಪಿ.ಎಸ್.3/2025**

**ಪಿರ್ಯಾದಿದಾರರು** – ರಾಜ್ಯದ ಪರವಾಗಿ
ಮಾನ್ಯ ಸಾರ್ವಜನಿಕ ಅಭಿಯೋಜಕರು,
ಹಾವೇರಿ.

**– ವಿರುದ್ಧ –**

**ಆರೋಪಿ** –1. ಸಾಹಿಲ್ ಲಾಲಸಾಬ ಹುಬ್ಬಳ್ಳಿ ಹಾಗೂ ಇನ್ನೊಬ್ಬರು

***:: ದೋಷಾರೋಪಣೆ ::***

ಹಾವೇರಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರಾದ ಶ್ರೀ ಬಿರಾದಾರ ದೇವಿಂದ್ರಪ್ಪ ಎನ್., ಬಿ.ಎ., ಎಲ್.ಎಲ್.ಬಿ.(ಸ್ಪೆಶಲ್); ನಾನು ಈ ಕೆಳಕಂಡ ಆರೋಪಿತರಾದ -

1. ಸಾಹಿಲ್ ತಂದೆ ಲಾಲಸಾಬ ಹುಬ್ಬಳ್ಳಿ,
   ವಯಸ್ಸುಃ 20 ವರ್ಷ, ಉಃ ಕೂಲಿ ಕೆಲಸ,
2. ಅಬ್ದುಲಗಫೂರ ತಂದೆ ದಾದಾಪೀರ ಹುಲಗೂರ,
   ವಯಸ್ಸುಃ 23 ವರ್ಷ, ಉಃ ಕೂಲಿ ಕೆಲಸ,
   ಇಬ್ಬರ ವಾಸ ಸ್ಥಳಃ ಹಾವೇರಿ, ಹಾವೇರಿ ತಾ ಮತ್ತು ಜಿ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕಃ27/03/2025 ರಂದು ಮಧ್ಯಾಹ್ನ 12.25 ರಿಂದ 1.15 ಘಂಟೆಯ ಅವಧಿಯಲ್ಲಿ ಹಾವೇರಿಯ ಸಿಇಎನ್ ಕ್ರೈಂ ಪೊಲೀಸ ಠಾಣಾ ವ್ಯಾಪ್ತಿಯ ಹಾವೇರಿ ಶಹರದ ಹಳೆ ಪಿ.ಬಿ. ರಸ್ತೆಯ ಪಕ್ಕದಲ್ಲಿರುವ ಅಜ್ಜಯ್ಯನ ಗದ್ದುಗೆಯ ಮುಂದಿನ ಬೀಡಿ ಅಂಗಡಿಯ ಪಕ್ಕದ ಸಾರ್ವಜನಿಕ ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಸುಮಾರು ರೂ.20,000/- ಮೌಲ್ಯದ 2 ಕೆಜಿ 250 ಗ್ರಾಂ ತೂಕದ(ಬಟ್ಟೆ ಚೀಲ ಸೇರಿ) ಹಾಗೂ ರೂ.20,000/- ಮೌಲ್ಯದ 2 ಕೆಜಿ 258 ಗ್ರಾಂ ತೂಕದ ಮತ್ತು

2 ನೇ ಆರೋಪಿಯಾದ ನೀವು ಸುಮಾರು ರೂ.20,000/- ಮೌಲ್ಯದ 2 ಕೆಜಿ 236 ಗ್ರಾಂ ತೂಕದ ಹೂವು, ಮೊಗ್ಗು ಬೀಜ ಮಿಶ್ರಿತ ಗಂಟು ಗಂಟಾದ ಅರ್ಧಮರ್ಧ ಒಣಗಿದ ಘಾಟು ವಾಸನೆಯುಳ್ಳ ಗಾಂಜಾ ಗಿಡದ ಒಣಗಿದ ತಪ್ಪಲು ಸಮೇತ ಇರುವ ಕಡ್ಡಿಗಳಿದ್ದುದು ಒಟ್ಟು 6 ಕೆಜಿ 744 ಗ್ರಾಂ ತೂಕದ ಗಾಂಜಾ ಮಾರಾಟಕ್ಕಾಗಿ ಸ್ವಾಧೀನ ಹೊಂದಿ, ಆ ಮೂಲಕ ಎನ್.ಡಿ.ಪಿ.ಎಸ್. ಕಾಯ್ದೆ-1985 ರ ಕಲಂ.20(b)(ii)(B) ಸಹವಾಚಕ ಕಲಂ.8 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

**ಹಾವೇರಿ** **(ಬಿರಾದಾರ ದೇವಿಂದ್ರಪ್ಪ ಎನ್.)**

**ದಿನಾಂಕಃ 06/08/2025** **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**

**ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.**

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆ: ಸ್ಪೆಷಲ್ ಎನ್.ಡಿ.ಪಿ.ಎಸ್.3/2025

ಫಿರ್ಯಾದಿ - ಸರಕಾರ – ಪ್ರತಿನಿಧಿಸುವವರು
ಸರಕಾರಿ ಅಭಿಯೋಜಕರು, ಹಾವೇರಿ.

**– ವಿರುದ್ಧ –**

ಆರೋಪಿ -1. ಸಾಹಿಲ್ ತಂದೆ ಲಾಲಸಾಬ ಹುಬ್ಬಳ್ಳಿ,
ವಯಸ್ಸು: 20 ವರ್ಷ, ಉ: ಕೂಲಿ ಕೆಲಸ,
ವಾಸ ಸ್ಥಳ: ಹಾವೇರಿ, ಹಾವೇರಿ ತಾ ಮತ್ತು ಜಿ.

## ಆರೋಪಿಯ ಹೇಳಿಕೆ

ಪ್ರಶ್ನೆ-1 - ನಿಮ್ಮ ಮೇಲೆ ಓದಿ ಹೇಳಲಾದ ದೋಷಾರೋಪಣೆಯನ್ನು ತಿಳಿದುಕೊಂಡಿರುವಿರಾ?

ಉತ್ತರ - ತಿಳಿದಿದೆ.

ಪ್ರಶ್ನೆ-2 - ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ಅಧಿವಿಚಾರಣೆ ಬಯಸುತ್ತೀರೋ?

ಉತ್ತರ - ವಿಚಾರಣೆಯಾಗಲಿ.

ಆರೋಪಿ ಸಹಿ

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ದೋಷಾರೋಪಣೆಯನ್ನು ಓದಿ ಹೇಳಲಾಗಿದ್ದು, ಅವರು ಕೊಟ್ಟ ಹೇಳಿಕೆಯನ್ನು, ನಾನೇ ಖುದ್ದು ದಾಖಲಿಸಿಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ.)

**ಸ್ಥಳ: ಹಾವೇರಿ**

**ದಿನಾಂಕ: 06/08/2025**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.**

**ಪ್ರಕರಣ ಸಂಖ್ಯೆ: ಸ್ಪೆಷಲ್ ಎನ್.ಡಿ.ಪಿ.ಎಸ್.3/2025**

ಫಿರ್ಯಾದಿ - ಸರಕಾರ – ಪ್ರತಿನಿಧಿಸುವವರು
ಸರಕಾರಿ ಅಭಿಯೋಜಕರು, ಹಾವೇರಿ.

**– ವಿರುದ್ಧ –**

ಆರೋಪಿ -2. ಅಬ್ದುಲಗಫೂರ ತಂದೆ ದಾದಾಪೀರ ಹುಲಗೂರ,
ವಯಸ್ಸು: 23 ವರ್ಷ, ಉ: ಕೂಲಿ ಕೆಲಸ,
ವಾಸ ಸ್ಥಳ: ಹಾವೇರಿ, ಹಾವೇರಿ ತಾ ಮತ್ತು ಜಿ.

**ಆರೋಪಿಯ ಹೇಳಿಕೆ**

ಪ್ರಶ್ನೆ-1 - ನಿಮ್ಮ ಮೇಲೆ ಓದಿ ಹೇಳಲಾದ ದೋಷಾರೋಪಣೆಯನ್ನು ತಿಳಿದುಕೊಂಡಿರುವಿರಾ?

ಉತ್ತರ - ತಿಳಿದಿದೆ.

ಪ್ರಶ್ನೆ-2 - ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ಅಧಿವಿಚಾರಣೆ ಬಯಸುತ್ತೀರೋ?

ಉತ್ತರ - ವಿಚಾರಣೆಯಾಗಲಿ.

ಆರೋಪಿ ಸಹಿ

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ದೋಷಾರೋಪಣೆಯನ್ನು ಓದಿ ಹೇಳಲಾಗಿದ್ದು, ಅವರು ಕೊಟ್ಟ ಹೇಳಿಕೆಯನ್ನು, ನಾನೇ ಖುದ್ದು ದಾಖಲಿಸಿಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ.)

**ಸ್ಥಳ: ಹಾವೇರಿ**

**ದಿನಾಂಕ: 06/08/2025** **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.**